ರಾಜಕೀಯದಲ್ಲಿ ಅನುಭವಿಸಿದ ವೈಫಲ್ಯವನ್ನು ಗಮನಿಸಬಹುದು.)

ಎಂಜಿಆರ್ ಮೊದಲು ಗಾಂಧೀಜಿಯಿಂದ ಆಕರ್ಷಿತರಾಗಿ ಕಾಂಗ್ರೆಸ್ ಸೇರಿದರೂ, ಅನತಿ ಕಾಲದಲ್ಲೇ ಉತ್ಕಟ ಭಾಷಾಭಿಮಾನದ ಹಾಗೂ ಕ್ರಾಂತಿಕಾರಿ ಸೈದ್ಧಾಂತಿಕತೆಯ ದ್ರಾವಿಡ ಚಳವಳಿ ಅವರನ್ನು ಸೆಳೆಯಿತು. ಹಾಗಾಗಿ ಈ ಜನಪ್ರಿಯ ನಟ ಡಿಎಂಕೆ ಸೇರಿದರು. ಪಕ್ಷಕ್ಕೆ ತಾರಾವರ್ಚಸ್ಸನ್ನೂ ತಂದುಕೊಟ್ಟರು. ಆದರೆ ಅಣ್ಣಾದೊರೈ ಕಾಲವಾದ ನಂತರ, ಇವರನ್ನು ಮೂಲೆಗುಂಪು ಮಾಡಿ ತಮ್ಮ ಮಗನನ್ನು ಮುಂಚೂಣಿಗೆ ತರಲು ಕರುಣಾನಿಧಿ ಯತ್ನಿಸಿದಾಗ ಸಿಡಿದೆದ್ದ ಎಂಜಿಆರ್, ಪಕ್ಷ ತೊರೆದು ತಮ್ಮದೇ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ ಸ್ಥಾಪಿಸಿದರು (1972); ಐದು ವರ್ಷ ರಾಜ್ಯಾದ್ಯಂತ ತಿರುಗಿ ಸಂಘಟನೆ ಮಾಡಿ 1977ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೇರಿದರು. ಆ ಮೂಲಕ ದೇಶದಲ್ಲೇ ಉನ್ನತ ಹುದ್ದೆಗೇರಿದ ಮೊಟ್ಟಮೊದಲ ಚಿತ್ರನಟ ಎಂಬ ಖ್ಯಾತಿಗೆ ಪಾತ್ರರಾದರು. ಮೂರು ದಶಕಗಳ ಕಾಲ ತಮಿಳು ಚಿತ್ರರಂಗವನ್ನು ಆಳಿದ್ದ ಎಂಜಿಆರ್‌ರನ್ನು ಹತ್ತು ವರ್ಷ (ನಡುವಣ ಅಲ್ಪಾವಧಿಯ ರಾಷ್ಟ್ರಪತಿ ಆಡಳಿತ ಬಿಟ್ಟರೆ)– ಅವರ ಸಾವಿನವರೆಗೂ (1987)– ಅಧಿಕಾರದಿಂದ ಅಲ್ಲಾಡಿಸಲು ಯಾರಿಗೂ ಸಾಧ್ಯವಾಗಲಿಲ್ಲ.

ಡಿಎಂಕೆಯಿಂದ ಹೊರಬಂದು ಅಣ್ಣಾ ಡಿಎಂಕೆ ಸ್ಥಾಪಿಸಿದಾಗಲೂ ಎಂಜಿಆರ್ ತಮ್ಮ ಹೊಸ ಪಕ್ಷದ ಪ್ರಚಾರ ನಡೆಸಲು ಬಳಸಿಕೊಂಡಿದ್ದು (ನೇಟ್ರು ಇಂಡ್ರು ನಾಳೈ, ಇದಯಕನಿ, ಇಂಡ್ರು ಪೋಲ್ ಎಂಡ್ರುಂ ವಾಳ್ಗ ಮುಂತಾದ) ಸಿನಿಮಾಗಳನ್ನೇ ಎಂಬುದನ್ನು ಗಮನಿಸಿದರೆ, ತಮಿಳುನಾಡಿನ ಸಿನಿಮಾ ಹಾಗೂ ರಾಜಕೀಯದ ಅಂತರ್‌ಸಂಬಂಧದ ಎಳೆಗಳು ಸ್ಪಷ್ಟವಾಗಬಹುದು!

ಅಣ್ಣಾದೊರೈ ಕಾಲದಲ್ಲೇ ಆರಂಭವಾಗಿದ್ದ 'ಮಿಡ್‌ಡೇ ಮೀಲ್'ಗೆ (ಬಿಸಿಯೂಟ) ಎಂಜಿಆರ್ ಮತ್ತಷ್ಟು ಪೌಷ್ಟಿಕಾಂಶ ತುಂಬಿದರು. ಪಿಯುಸಿ ಹಂತದವರೆಗೆ ಉಚಿತ ಶಿಕ್ಷಣ ತಂದರು. ಹೆಣ್ಣುಮಕ್ಕಳ ಪರವಾದ ಹಲವಾರು ಯೋಜನೆಗಳನ್ನು ಜಾರಿಗೆ ತಂದರು. ಸಿಂಗಪೂರ್ ನೋಡಿಕೊಂಡು ಬಂದು ಮದ್ರಾಸ್‌ನಲ್ಲಿ ದೇಶದಲ್ಲೇ ಪ್ರಪ್ರಥಮ ಫ್ಲೈ ಓವರ್ ನಿರ್ಮಿಸಿದರು.– ಇವೆಲ್ಲವನ್ನೂ ಅವರ ಸಾಧನೆಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳಬಹುದು. ಅಷ್ಟಾದರೂ, ಎಂಜಿಆರ್ ವಿರೋಧಿಗಳ ವಿಷಯದಲ್ಲಿ ಕಠಿಣರಾಗಿದ್ದರು. ಪತ್ರಕರ್ತರ ಟೀಕೆಗಳನ್ನೂ ಅವರು ಸಹಿಸುತ್ತಿರಲಿಲ್ಲ. ಪಕ್ಷ ಹಾಗೂ ಸರ್ಕಾರವನ್ನು ನಡೆಸುತ್ತಿದ್ದುದು ಸರ್ವಾಧಿಕಾರಿಯ ಹಾಗೆಯೇ ಎಂಬುದೂ ನಮ್ಮ ಮನಸ್ಸಿನಲ್ಲಿರಬೇಕು. ಅವರ ಆರೋಗ್ಯ ಕೈ ಕೊಟ್ಟಾಗಲೆಲ್ಲ, ವಿಶೇಷವಾಗಿ ಬದುಕಿನ ಕಡೆಯ ವರ್ಷಗಳಲ್ಲಿ– ಆಡಳಿತ ಯಂತ್ರವೇ ಸ್ತಬ್ಧವಾಗಿಹೋಗುವ ಮಟ್ಟಿಗೆ ಅಧಿಕಾರ ಅವರೊಬ್ಬರಲ್ಲೇ ಕೇಂದ್ರೀಕೃತವಾಗಿತ್ತು. ಆದರೆ ಅವರ ಜನಪ್ರಿಯತೆಗೆ ಇವು ಯಾವುದೂ ಅಡ್ಡಿಯಾಗಲಿಲ್ಲ. ಅವರು ತೀರಿಕೊಂಡಾಗ ಆತ್ಮಹತ್ಯೆ ಮಾಡಿಕೊಂಡವರು ಮೂವತ್ತಕ್ಕೂ ಹೆಚ್ಚು ಮಂದಿ!

ಸಿನಿಮಾಗಳಿಂದ ದಕ್ಕಿದ ಜನಪ್ರಿಯತೆಯ ಅಲೆ ಏರಿ ರಾಜಕೀಯ ಅಧಿಕಾರ ಗಳಿಸಿಕೊಂಡ ಎಂಜಿಆರ್ ಮತ್ತು ಎನ್‌ಟಿಆರ್ ಇಬ್ಬರ ನಡುವಣ ಸಾಮ್ಯಗಳನ್ನೂ ಗಮನಿಸಬೇಕು. ಇಬ್ಬರೂ ಸರ್ವಾಧಿಕಾರಿಗಳಂತೆ ದರ್ಬಾರು ನಡೆಸಿದವರೇ ಆದರೂ, ಅವರಿಬ್ಬರೂ ಅಧಿಕಾರಕ್ಕಾಗಿ ಬೇರೆ ಯಾರನ್ನೂ ನೆಚ್ಚಿದವರಲ್ಲ. ಯಾವ ಪಕ್ಷದ ಆಶ್ರಯವನ್ನೂ ಕೋರಿ ಹೋದವರಲ್ಲ. ತಮ್ಮದೇ ಹೊಸ ಪಕ್ಷ ಕಟ್ಟಿದವರು. ಆ ಬಲದ ಮೇಲೇ– ಅಂದರೆ ವೈಯಕ್ತಿಕ ವರ್ಚಸ್ಸನ್ನೇ ಪಣಕ್ಕಿಟ್ಟು ಜನಬೆಂಬಲ ಗಳಿಸಿ ರಾಜಕೀಯ ಬದುಕು ಕಟ್ಟಿಕೊಂಡವರು. ಆ ವಿಷಯದಲ್ಲಿ ಇವರಿಬ್ಬರದು ವಿಶಿಷ್ಟ ಹಾದಿ.

ಮಿಕ್ಕವರ ಕಥೆ ಹಾಗಲ್ಲ.

ಇಂದು ಭಾರತದ ರಾಜಕೀಯ ರಂಗದಲ್ಲಿ ಎಷ್ಟೊಂದು ಮಂದಿ ಸಿನಿಮಾದವರಿದ್ದಾರೆ! ಸುಮ್ಮನೆ ಕಣ್ಣಾಡಿಸಿ:

ಅಮಿತಾಭ್ ಬಚನ್, ಕಾಂಗ್ರೆಸ್ ಟಿಕೆಟ್ ಮೇಲೆ ಲೋಕಸಭೆಗೆ ಸ್ಪರ್ಧಿಸಿ ಸೋತ (ರಾಮಾಯಣ ಧಾರಾವಾಹಿಯ ರಾಮ) ಅರುಣ್ ಗೋವಿಲ್, ಅದೇ ರಾಮಾಯಣದ ರಾವಣ ಅರವಿಂದ್ ತ್ರಿವೇದಿ, ಮಹಾಭಾರತ ಧಾರಾವಾಹಿಯ ಕೃಷ್ಣ– ನಿತೀಶ್ ಭಾರದ್ವಾಜ್, ಮೋಹನ್‌ಬಾಬು, ಬಿಜೆಪಿ ಸ್ಪರ್ಧಿ ಬಪ್ಪಿ ಲಾಹಿರಿ, 'ಪ್ರಜಾರಾಜ್ಯಂ' ಪಕ್ಷ ಕಟ್ಟಿ ಮತ್ತೆ ಕಾಂಗ್ರೆಸ್ ಮಡಿಲು ಸೇರಿದ ಚಿರಂಜೀವಿ, ದಾಸರಿ ನಾರಾಯಣ ರಾವ್, ದಾರಾಸಿಂಗ್ (ರಾಜ್ಯಸಭೆ), ರಾಮಾಯಣದ ಸೀತೆ ದೀಪಿಕಾ ಚಿಕ್ಲಿಯಾ, ಧರ್ಮೇಂದ್ರ, ಗೋವಿಂದ, ಗುಲ್ ಪನಾಗ್ (ಎಎಪಿ ಅಭ್ಯರ್ಥಿ), ಹೇಮಾ ಮಾಲಿನಿ, ಜಯಾ ಬಚನ್, ಜಯಲಲಿತಾ, ಜಯಪ್ರದಾ, ಜಾವೇದ್ ಜಾಫ್ರಿ (ಸ್ಪರ್ಧಿ), ಅನುಪಮ್ ಖೇರ್ ಪತ್ನಿ ಕಿರಣ್ ರಾವ್, ಕೋಟ ಶ್ರೀನಿವಾಸರಾವ್, ಸ್ಪರ್ಧಿಸಿ ಸೋತ ನಿರ್ದೇಶಕ ಮಹೇಶ್ ಮಂಜ್ರೇಕರ್, ಎಂಪಿ ಮಿಥುನ್ ಚಕ್ರವರ್ತಿ, ಮೂನ್ ಮೂನ್ ಸೇನ್, ನೆಪೋಲಿಯನ್, ನಂದಮೂರಿ ಬಾಲಕೃಷ್ಣ, ಪರೇಶ್ ರಾವಲ್, ಪವನ್ ಕಲ್ಯಾಣ್, ಎಸ್.ಎಸ್. ರಾಜೇಂದ್ರನ್, ಪಿ. ಶರತ್ ಕುಮಾರ್, ರಾಜ್ ಬಬ್ಬರ್, (ಪಕ್ಷೇತರಳಾಗಿ ಸ್ಪರ್ಧಿಸಿ ಸೋತ) ರಾಖಿ ಸಾವಂತ್, ರೇಖಾ, ಸಂಜಯ್ ದತ್, ಶಬಾನಾ ಅಜ್ಮಿ, ಶತ್ರುಘ್ನ ಸಿನ್ಹಾ, (ಸೋತ) ಶೇಖರ್ ಸುಮನ್, ಸ್ಮೃತಿ ಇರಾನಿ, ಸುನಿಲ್ ದತ್, ಸುರೇಶ್ ಒಬೆರಾಯ್, ವಿಜಯಕಾಂತ್, ವಿನೋದ್ ಖನ್ನಾ.. ಪಟ್ಟಿ ಮುಗಿಯುವುದೇ ಇಲ್ಲ!

ಇವರೆಲ್ಲರೂ ಈಗಾಗಲೇ ಅಸ್ತಿತ್ವದಲ್ಲಿರುವ ಪಕ್ಷಗಳ ಚುಂಗು ಹಿಡಿದು ಅಧಿಕಾರದ ಹೊಸ್ತಿಲು ತುಳಿದವರು. ಅಂದರೆ ಸಿನಿಮಾ/ ಟಿವಿ– ಇವರಿಗೆ ಒಂದು ಮಟ್ಟದ ಜನಪ್ರಿಯತೆ ತಂದುಕೊಟ್ಟಿದೆ. ಮತ್ತು ಅದೇ ಇವರ ಉನ್ನತಿಯ ಮೆಟ್ಟಿಲು! ಅಂದರೆ ಇವರ ಪಾಲಿಗೆ ರಾಜಕೀಯವೆಂಬುದು ಅಧಿಕಾರ ಸ್ಥಾನ ಮಾತ್ರ. ಅದರಾಚೆಗೆ ಬೇರೇನೂ ಅಲ್ಲ. ಹಾಗಾಗಿಯೇ ರಾಜಕಾರಣ ಎಂದರೆ ಜನರ ಆಲೋಚನೆಯನ್ನು ಬದಲಿಸುವ ಚಟುವಟಿಕೆ ಎಂಬ ವ್ಯಾಖ್ಯಾನ ಇವರಾರಿಗೂ ಅನ್ವಯಿಸುವುದಿಲ್ಲ.


ಹೇಮಾಮಾಲಿನಿ

ಇನ್ನು ಕರ್ನಾಟಕದ ಉದಾಹರಣೆಗಳಿಗೆ ಬರುವುದಾದರೆ—

ಅನಂತ್‌ನಾಗ್ ಮತ್ತು ಶಂಕರ್‌ನಾಗ್ ಸೋದರರು– ಕನ್ನಡ ಚಿತ್ರರಂಗಕ್ಕೆ ಹೊಸ ಗಾಳಿಯಂತೆ ಬೀಸಿ ಬಂದವರು. ಅದರಲ್ಲೂ ಎದ್ದು ಕಾಣುವ ಪ್ರಬುದ್ಧತೆಯ ಸ್ಫುರದ್ರೂಪಿ ನಟ ಅನಂತ್, ಜೆಪಿ ಚಳವಳಿ ಕಾಲದಿಂದಲೂ ರಾಜಕೀಯದಲ್ಲಿ ಆಸಕ್ತಿ ಬೆಳೆಸಿಕೊಂಡವರು. ಅಪ್ಪಟ ಕಾಂಗ್ರೆಸ್ ವಿರೋಧಿ ಅಲೆಯಲ್ಲಿ ತೇಲಿ ಹೋದ ನಾಗ್ ಸೋದರರು ಸಹಜವಾಗಿಯೇ ರಾಮಕೃಷ್ಣ ಹೆಗಡೆಯವರ ಪರವಾಗಿ ಸಕ್ರಿಯ ಪ್ರಚಾರ ಮಾಡುವ ಮೂಲಕ ತಮ್ಮ ರಾಜಕೀಯ ಪಯಣ ಆರಂಭಿಸಿದರು. ಅನಂತ್ ಮುಂದಕ್ಕೆ ಮಂತ್ರಿಯೂ ಆದರು. ಅಕಾಲ ಸಾವು ಶಂಕರ್‌ರನ್ನು ಸೆಳೆದೊಯ್ಯದಿದ್ದರೆ ಅವರೂ ರಾಜಕೀಯ ಪ್ರವೇಶ ಮಾಡುತ್ತಿದ್ದರೋ ಏನೋ.. ಗೊತ್ತಿಲ್ಲ.

ತುರ್ತುಪರಿಸ್ಥಿತಿಯ ಸೋಲಿನ ನಂತರ 1978ರಲ್ಲಿ ಚಿಕ್ಕಮಗಳೂರು ಉಪಚುನಾವಣೆಯಲ್ಲಿ ಮರುಹುಟ್ಟು ಪಡೆದ ಇಂದಿರಾ ಗಾಂಧಿಯವರ ಎದುರು ರಾಜ್‌ಕುಮಾರ್‌ರನ್ನು ನಿಲ್ಲಿಸುವ ಬಲವಾದ ಪ್ರಯತ್ನ ನಡೆದಿತ್ತು. ಆದರೆ ರಾಜ್ ರಾಜಕೀಯದಿಂದ ಸದಾ ಮಾರು ದೂರವೇ ಉಳಿದಿದ್ದು ಕೂಡ ಈ ಚರಿತ್ರೆಯ ಒಂದು ಪುಟ್ಟ ಅಧ್ಯಾಯ.

ಅನಂತ್ ನಂತರ ರಾಜಕೀಯಕ್ಕೆ ಬಂದ ಅಂಬರೀಷ್ ಕೂಡ ಎಂಪಿಯಾಗಿ, ಕೇಂದ್ರ ಮಂತ್ರಿಯಾಗಿ (ಅಧಿಕಾರ ಸ್ವೀಕರಿಸುವ ಮುನ್ನವೇ ರಾಜೀನಾಮೆ ಕೊಟ್ಟು), ನಂತರ ಎಂಎಲ್‌ಎ ಆಗಿ, ಕರ್ನಾಟಕದಲ್ಲಿಯೂ ಸಚಿವರಾಗಿ ಈಗ